(SRI S. NIJALINGAPPA)

that are likely to be affected by waters of Narayanapura Reservoir to come.

		Rs. in crores
(b) (1) Narayanapura Dam	...	26.80
(2) Narayanapura Canals (Left and Right)	...	31.10
(3) Almatti Dam (foundations only)	...	00.30
Total	...	58.20

(c) Rs. 120 crores.

(d) The preliminary work is already commenced.

Construction of a Major Reservoir at Almatti.

*Q.—310. Sri S. M. GURADDI (Muddebihal):—

Will the Government be pleased to state:—

(a) whether it is a fact that they had contemplated to construct a Major Reservoir at Almatti;

(b) the capacity of the said Reservoir (in TMC FT) and the extent of land that would be irrigated in Bijapur District?

A.—Sri S. NIJALINGAPPA (Chief Minister).—

(a) Yes.

(b) —

(i) Capacity	...	52. 8 TMC. Ft.
(ii) Area irrigated in Bijapur District	...	2.72 lakhs acres.
(iii) Area irrigated in Gulbarga District	...	2.80 lakhs acres.
(iv) Area to be irrigated	...	5.52 lakhs acres.

Construction of Irrigation Project to the Krishna River near Almatti in Bijapur District.

*Q.—401. Sri J. L. KABADI (Baradol).—

Will the Government be pleased to state:—

(a) whether they have received any representation requesting to give priority for the construction of Irrigation Project to the Krishna River near Almatti in Bijapur District and then to take up the construction of the Narayanapura Project;

(*b*) whether they have received any direction from the Central Government to give priority to the Narayanapura Project and to take up the Almatti Project later on ;

(*c*) the amounts proposed to be spent in connection with the Narayanapura Project and the Almatti Project which have been sanctioned and the authority that has proposed the same ;

(*d*) the steps they have taken on the representations received by them from time to time urging to take up the construction of Almatti Project first and then to take up the Narayanapura Project later on ?

A.—Sri S. NIJALINGAPPA (Chief Minister).—

(*a*) Yes.

(*b*) Yes.

(*c*) The following amounts have been proposed :—

	Rs. in Crores
(*i*) Narayanapura Dam and Canals ...	57. 9
(*ii*) Almatti Dam and Canal ...	0.30
Total ...	58. 2

(*d*) This Government are (*a*) taking up work on both the dams simultaneously and (*b*) persuading Government of India to approve providing irrigation facilities available under both dams even in the very first stage.

Sri S. NIJALINGAPPA.—Sir, there is a slight correction regarding Q. No. 353 and 401. In the answer Rs. 30 lakhs have been mentioned as provided for the Almatti Dam. Laterly, the whole scheme has been given the green signal and accepted. So, we have provided Rupees One Crore each for these two projects.

ಶ್ರೀ ಸಿ. ಜೆ. ಮುಕ್ಕಣ್ಣಿಪ್ಪ.—ನಾರಾಯಣಪುರ ಅಣೆಕಟ್ಟನ್ನು ಕಟ್ಟುವ ಸ್ಥಳವನ್ನು ಬದಲಾಯಿಸ ಬೇಕೆಂದು ಡಾಕ್ಟರ್. ಕೆ. ಎಲ್. ರಾವ್ ಅವರು ಬಂದಾಗ ಸೂಚನೆಯನ್ನು ಕೊಟ್ಟರು ಎಂದು ಪರದಿ ಯಲ್ಲಿ ನೋಡಿದ್ದೆ. ಅದರ ವಿಚಾರವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚನೆಯನ್ನು ಕೊಟ್ಟಿದ್ದಾರೆ. ಬಹುಶಃ ಸ್ವಲ್ಪ ಹೆಚ್ಚು ಕಡಮೆ ಅದೇ ಸ್ಥಳದಲ್ಲಿಯೇ ಮಾಡಬಹುದು. ಕೆಲಸ ನಡೆಯುವುದರಲ್ಲಿ ಏನೂ ಹಿಂದು ಮುಂದು ಆಗುವುದಿಲ್ಲ.

Sri D. M. SIDDAIAH.—Has Dr. K. L. Rao, Minister of State in the Union Ministry of Irrigation and Power said that this Almatti Dam has to be increased by 20 feet ?

Sri S. NIJALINGAPPA.—He just expresed his opinion that it would be even increased by twenty feet.

ಶ್ರೀ ಜೆ. ಎಲ್. ಕಬಾಡಿ.—ಕೇಂದ್ರ ಸರ್ಕಾರದಿಂದ ಎಷ್ಟು ಎತ್ತರ ಮಾಡಬೇಕು ಎಂಬ ಬಗ್ಗೆ ಏನಾದರೂ ಸರ್ಕಾರಕ್ಕೆ ನಿರ್ದೇಶನ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಬರೆದು ತಿಳಿಸಿಲ್ಲ.

ಶ್ರೀ ಎಸ್. ಎಂ. ಗುರಡ್ಡಿ.—ನಾರಾಯಣಪುರ ಅಣೆಕಟ್ಟಿನ ಸ್ಥಳವನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂಬ ಸೂಚನೆಯನ್ನು ಶ್ರೀ ರಾವ್ ಅವರು ಕೊಟ್ಟಿದ್ದಾರೆಂದು ತಿಳಿಸಿದರು. ಅಲ್ಲಿ ಈಗ ಕೆಲಸ ಹೇಗೆ ಸಾಗುತ್ತಿದೆ ? ಈಗಾಗಲೇ ಐದಾರು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನೂ ತೀರ್ಮಾನಕ್ಕೆ ಬಾರದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಬಂದು ನೋಡಿ ಒಂದೂವರೆ ತಿಂಗಳಾಯಿತು. ಆ ಬಗ್ಗೆ ತಿಳಿಸುತ್ತಾರೆ. ಬೇರೆ ಸ್ಥಳಕ್ಕೆ ಬದಲಾಯಿಸಿದರೂ ಅದಕ್ಕೆ ಹೆಚ್ಚು ಖರ್ಚಾಗುವುದಿಲ್ಲ.

Sri SIDDIAH KASHIMATH.—May I know whether any land has been acquired for the Narayanapura Project and compensation paid to land owners?

Sri S. NIJALINGAPPA.—It is too early to give a reply to that question.

ಶ್ರೀ ಇ. ನಾರಾಯಣ ಗೌಡ.—ಸಾಕಾದಷ್ಟು ಅನುದಾನಿಗಳು ದೊರಕಿದರೂ ಎರಡು ಪ್ರಾಜೆಕ್ಟ್‌ಗಳನ್ನೂ ಪೂರ್ತಿ ಮಾಡಬೇಕಾದರೆ 7-8 ವರ್ಷಗಳು ಬೇಕಾಗುತ್ತವೆ ಎಂದು ಹೇಳಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಗ್ರಾಂಟ್ ಎಷ್ಟು? ರಾಜ್ಯ ಸರ್ಕಾರ ಮೆಚ್ಚ ಮಾಡಬೇಕಾದ ಹಣವೆಷ್ಟು? ರಾಜ್ಯ ಸರ್ಕಾರದವರು ಇದಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಏನು ಏರ್ಪಾಡನ್ನು ಮಾಡಿದ್ದಾರೆ, ಸ್ವಾಮಿ?

ಶ್ರೀ ಎಸ್. ನಿಜಲಿಂಗಪ್ಪ.—ಕೇಂದ್ರ ಸರ್ಕಾರದವರು ಇದರ ವೆಚ್ಚವನ್ನು ವಹಿಸಿಕೊಳ್ಳಬೇಕೆಂದು ಕೇಳಿದ್ದೇವೆ. ಆದರೆ ಅದರ ಜವಾಬ್ದಾರಿ ಎಲ್ಲ ನಮ್ಮ ಮೇಲೆಯೇ ಇದೆ. ಈ ಎರಡು ಪ್ರಾಜೆಕ್ಟ್‌ಗಳಿಗೆ ಬೇಕಾದ 120 ಕೋಟಿ ರೂಪಾಯಿಗಳನ್ನೂ ಕೇಂದ್ರ ಸರ್ಕಾರದವರೇ ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾರಾಯಣಪುರದ ಸ್ಕೆಟನ್ನು ಬದಲಾಯಿಸಿದ ಮೇಲೆ ಮೊದಲಿನ ಅಂದಾಜು ಎಷ್ಟು ಇತ್ತೋ ಅಷ್ಟಾಗದೆ ಸ್ವಲ್ಪ ಕಡಮೆ ಆಗುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಬದಲಾಯಿಸುವ ಬಗ್ಗೆ ಸೂಚನೆಯನ್ನು ಕೊಟ್ಟಿದ್ದಾರೆ. ಬದಲಾಯಿಸಬೇಕೋ ಏನೋ ಎನ್ನುವ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಹಾಗೆ ಬದಲಾಯಿಸಿದರೂ ಸ್ವಲ್ಪ ಸ್ವಲ್ಪ ಮಾತ್ರ ಹೆಚ್ಚು ಕಡಮೆಯಾಗಬಹುದು. ಖರ್ಚು ಹೆಚ್ಚು ಕಡಮೆ ಆಗುವುದಿಲ್ಲ, ಅದರಲ್ಲ ಏನೂ ಬದಲಾವಣೆಯಾಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ನಾರಾಯಣಪುರ ಯೋಜನೆಗೆ ಅದ್ಯತೆಯನ್ನು ಕೊಟ್ಟು ಆಲಮಟ್ಟಿ ಯೋಜನೆಯನ್ನು ಕಡೆಗೆ ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಆದೇಶ ಬಂದಿದೆಯೇ ಎಂದರೆ ಬಂದಿದೆ ಎಂದು ಹೇಳಿದ್ದೀರಿ: ಹಾಗೆ ಬಂದಿದ್ದರೆ ಏಂದು ಬಂದಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಈ ಉತ್ತರ ಕೊಟ್ಟದ್ದು ಏಪ್ರಿಲ್ ತಿಂಗಳನಲ್ಲಿ. ಈಚೆಗೆ ಬಹಳ ಬದಲಾವಣೆಗಳಾಗಿವೆ. ಡಾಕ್ಟರ್ ಕೆ. ಎಲ್. ರಾವ್ ಅವರು ಬಂದು ನೋಡಿದರು. ಹಿಂದೆ ಪೋರ್ಟ್‌ಫೋಲಿಯೋ ಹೊಂದದೆ ಇದ್ದ, ಈಗ ಪ್ರಧಾನ ಮಂತ್ರಿಗಳಾಗಿರುವ ಶಾಸ್ತ್ರಿಗಳೂ ಬಂದು ಅಸ್ತಿಭಾರ ಶಿಲೆಯನ್ನು ಹಾಕಿ ಹೋಗಿದ್ದಾರೆ. ಆದುದರಿಂದ ಈ ವಿಷಯ ಈಗ ಉದ್ಭವವಾಗುವುದಿಲ್ಲ.

ಶ್ರೀ ವೀರಭದ್ರಪ್ಪ ಈರಪ್ಪ.—ನಾರಾಯಣಪುರ ಯೋಜನೆಯಿಂದ ರಾಯಚೂರು ಜಿಲ್ಲೆಯಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ನಾರಾಯಣಪುರ ಯೋಜನೆಯಿಂದ ರಾಯಚೂರು ಜಿಲ್ಲೆಯಲ್ಲಿ 3.7 ಲಕ್ಷ ಎಕರೆಗಳೂ ಗುಲ್ಬರ್ಗದಲ್ಲಿ 2.70 ಲಕ್ಷ ಎಕರೆಗಳೂ ಸಾಗುವಳಿಯಾಗುತ್ತವೆ.

ಶ್ರೀ ಎಸ್. ಗೋಪಾಲಗೌಡ.—ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳ ಶಂಕುಸ್ಥಾಪನೆ ಮಾಡಿರುವುದರಿಂದ ಈ ಯೋಜನೆಗಳನ್ನು ಪರಿಶೀಲನೆ ಮಾಡಿ ಈಗಾಗಲೇ ಕೇಂದ್ರದ ನೀರಾವರಿ ಖಾತೆಯವರು ಅವಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆಯೇ? ಇವಕ್ಕೆ ಹಣ ಕಾಸು ಯಾರು ಒದಗಿಸಬೇಕೆಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದ ಮೇಲೆ ಶಂಕುಸ್ಥಾಪನೆ ಮಾಡಿದ್ದಾರೆಯೆ ಅಥವಾ ಇವನ್ನು ತೆಗೆದುಕೊಳ್ಳಬೇಕೆಂದು ಮಾತ್ರ ಸೂಚನೆ ಮಾಡಿದ್ದಾರೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ವರ್ಷಗಟ್ಟಲೆ ಸಾಕಷ್ಟು ಯೋಜನೆ ಮಾಡಿದ್ದಾರೆ; ಈಗ ಇರುವುದು ಹಣಕಾಸಿನ ಪ್ರಶ್ನೆ ಒಂದೇ, ಅದನ್ನು ಅವರು ಕೊಡಬೇಕೆಂದು ಕೇಳಿದ್ದೇವೆ, ಕೊಡುತ್ತಾರೆಂಬ ನಂಬಿಕೆ ಇದೆ.

Sri S. SIVAPPA.—May I know the total capacity of the two dams—Narayanapura and Alamatti?

Sri S. NIJALINGAPPA.—I believe it is about 120 t.m.c.

Sri S. SIVAPPA.—Are the Government satisfied that 120 t. m. c. will be available according to the Krishna—Godavari water agreement after all the projects are built up?

Sri S. NIJALINGAPPA.—It is 120 t.m.c. for the first stage only. When the second stage is taken up, it will be 220 t. m. c. We have got that quantity of water available in the Krishna.

ಶ್ರೀ ಅಂದಾನಯ್ಯ.—ಈ ಎರಡು ಯೋಜನೆಗಳಿಂದ ಎಷ್ಟು ಎಕರೆ ಮುಳುಗಡೆಯಾಗಬಹುದು?

ಶ್ರೀ ಎಸ್. ನಿಜಲಿಂಗಪ್ಪ.—ಒಂದರಲ್ಲಿ 60 ಸಾವಿರ-ಇನ್ನೊಂದರಲ್ಲಿ 40 ಸಾವಿರ-ಆಗಬಹುದು.

ಶ್ರೀ ಎಸ್. ಎಂ. ಗುರಡ್ಡಿ.—ಆಲಮಟ್ಟಿ ಯೋಜನೆಯನ್ನು ಈಗ ಇರುವಂತೆ ಕೈಕೊಂಡರೆ, ಅದರಿಂದ ಬಿಜಾಪುರ ಜಿಲ್ಲೆಗೆ ಹೆಚ್ಚು ನೀರಾವರಿಯಾಗುವುದಿಲ್ಲ, ಇದು ಹೆಚ್ಚು ಆಗುವಂತೆ ಏನಾದರೂ ಮಾಡಿದ್ದೀರ?

ಶ್ರೀ ಎಸ್. ನಿಜಲಿಂಗಪ್ಪ.—ಇಪ್ಪತ್ತು ಅಡಿ ಎತ್ತರ ಮಾಡಿದರೆ ಈ ಪ್ರಶ್ನೆ ಬಗೆಹರಿಯುತ್ತದೆ.

ಶ್ರೀ ಎಸ್. ಎಂ. ಗುರಡ್ಡಿ.—ಈ ವಿಷಯದಲ್ಲಿ ಸರಕಾರದ ಅಭಿಪ್ರಾಯವೇನು?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಅಭಿಪ್ರಾಯವೂ ಅದೇ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೃಷ್ಣಾ ನದಿಯ ನೀರಿನಲ್ಲಿ ನಮಗೆ ಬರಬೇಕಾದ ಭಾಗವೆಲ್ಲ ಈ ಎರಡು ಯೋಜನೆಗಳನ್ನು ಮಾಡಿದರೆ ಪೂರ್ಣವಾಗಿ ಉಪಯೋಗವಾಗುತ್ತದೆಯೆ, ಅಥವಾ ಅದನ್ನು ಉಪಯೋಗಿಸಲು ಇನ್ನೂ ಯಾವುದಾದರೂ ಅಣೆಗಳನ್ನು ಕಟ್ಟಲು ಯೋಚನೆ ಮಾಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಪೂರ್ತಿ ನಮ್ಮ ಭಾಗವನ್ನು ಉಪಯೋಗಿಸಿಕೊಳ್ಳಬೇಕಾದರೆ ಇನ್ನೂ ಕಟ್ಟಬೇಕಾಗುತ್ತದೆ, ಅದನ್ನು ಇನ್ನೂ ಆಲೋಚನೆ ಮಾಡಿಲ್ಲ, ನಮಗೆ ಬರಬೇಕಾದ ಭಾಗ ಬರಬೇಕು, ಬರುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಈಚೆಗೆ ಕೇಂದ್ರದ ಮಂತ್ರಿಗಳು ನಮ್ಮ ರಾಜ್ಯಕ್ಕೆ ಭೇಟಿ ಇತ್ತಾಗ ರಾಜ್ಯದಲ್ಲಿ ನೀರಾವರಿ ಕಾರ್ಯಗಳು ಸಾಕಷ್ಟಿಲ್ಲದೆ ನಿಂತು ಹೋಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ?

ಶ್ರೀ ಎಸ್. ನಿಂಜಲಿಂಗಪ್ಪ.—ಸಾಕಷ್ಟು ಆಗಿಲ್ಲ, ಇನ್ನೂ ಆಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಎಸ್. ಶಿವಪ್ಪ.—ಎರಡೂ ಯೋಜನೆಗಳಿಗೆ 120 ಕೋಟಿ ರೂಪಾಯಿಗಳೆಂದು ಅಂದಾಜಾಗಿದೆ, ನಮ್ಮ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಗಣನೆಗೆತೆಗೆದುಕೊಂಡರೆ, ಈ ಎರಡನ್ನೂ ಇನ್ನು ಎಷ್ಟು ವರ್ಷಗಳಲ್ಲಿ ಪೂರೈಸಬಹುದೆಂಬ ಅಂದಾಜಿದೆ?

ಶ್ರೀ ಎಸ್. ನಿಜಲಿಂಗಪ್ಪ.—ನಾವೇ ಮಾಡಬೇಕೆಂದರೆ ತಡವಾಗುತ್ತದೆಂದೇ ಕೆಂದ್ರ ಸರಕಾರವನ್ನು ಮುಂಗಡವಾಗಿ ನಮಗೆ ಸಾಲ ಕೊಡಿ ಎಂದು ಕೇಳಿರುವುದು. ಭದ್ರಾ ಯೋಜನೆಯಂತೆ ಇದೂ ತಡವಾಗಬಾರದು, 16 ವರ್ಷವಾಗಬಾರದು, ನಮ್ಮ ಆಹಾರ ಪರಿಸ್ಥಿತಿಯ ದೃಷ್ಟಿಯಿಂದ ಬೇಗ ಆಗಬೇಕು, ಇದಕ್ಕೆ ನೀವು ಹಣ ಸಹಾಯ ಕೊಡಿ ಎಂದು ಕೇಳಿದ್ದೇವೆ, ಬಹುಶಃ ಅವರು ಒಪ್ಪಿಕೊಳ್ಳಬಹುದು.

ಶ್ರೀ ಎಸ್. ಎಂ. ಗುರಡ್ಡಿ.—ಈಗ ಪ್ರಧಾನಿಗಳಾಗಿರುವ ಶಾಸ್ತ್ರಿಗಳು ನಾರಾಯಣಪುರಕ್ಕೆ ಬಂದಾಗ ಈ ಯೋಜನೆಯನ್ನು ನಾಲ್ಕು ವರ್ಷಗಳಲ್ಲಿ ಪೂರೈಸುವುದಕ್ಕೆ ಏರ್ಪಾಡು ಮಾಡಿ ಅದಕ್ಕೆ ಬೇಕಾದ ಸಹಾಯವನ್ನು ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಟ್ಟಿಲ್ಲವೆ? ಮುಖ್ಯ ಮಂತ್ರಿಗಳು ದೆಹಲಿಗೆ ಹೋದಾಗ ಈ ಬಗ್ಗೆ ಅಲ್ಲಿ ಒತ್ತಾಯ ಮಾಡುತ್ತಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಐದು ವರ್ಷಗಳಿಗೆ ಬದಲು ನಾಲ್ಕೇ ವರ್ಷಗಳಲ್ಲಾದರೆ ಸಂತೋಷ ಎಂದು ಹೇಳಿದರು; ಹಣದ ವಿಚಾರ ಅವರ ಬಾಯಲ್ಲಿ ಬರಲಿಲ್ಲ. ಆದರೂ ಸರಕಾರ ನತತವಾಗಿ ಈ ವಿಚಾರದಲ್ಲಿ ಪ್ರಯತ್ನ ಮಾಡುತ್ತಿದೆ.

Sri S. RUDRAPPA.—May I know whether the Naryanapura Dam is going to be a diversion dam or main dam?

Sri S. NIJALINGAPPA.—It is a diversion dam.

Sri S. RUDRAPPA.—May I know the names of the talukas which are going to be benefited by the Narayanapura Dam?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಗುಲ್ಬರ್ಗ ಜಿಲ್ಲೆಯಲ್ಲಿ ಶೋರಾಪುರ, ಷಹಾಪುರ, ಜೇವರ್ಗಿ ತಾಲ್ಲೂಕುಗಳು ಮತ್ತು ರಾಯಚೂರು ಜಿಲ್ಲೆಯಲ್ಲಿ ದೇವದುರ್ಗ ಮತ್ತು ಲಿಂಗಸುಗುರು ತಾಲ್ಲೂಕಿನ ಸ್ವಲ್ಪ ಭಾಗಕ್ಕೆ ಪ್ರಯೋಜನವಾಗಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಆಲಮಟ್ಟಿಯಲ್ಲಿ 5·5 ಲಕ್ಷ ಎಕರೆ ನೀರಾವರಿಯಾಗುತ್ತದೆಂದು ಹೇಳಿದ್ದೀರಿ, ಇದು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಬರುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—280 ಸಾವಿರ ಎಕರೆ ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು 270 ಸಾವಿರ ಎಕರೆ ಬಿಜಾಪುರ ಜಿಲ್ಲೆಯಲ್ಲಿ.

ಶ್ರೀ ಎಸ್. ಶಿವಪ್ಪ.—ಈ ಎರಡನ್ನೂ ಕಟ್ಟಿದ ಮೇಲೆ ಮೈಸೂರು ರಾಜ್ಯದಲ್ಲಿ ಎಷ್ಟು ಎಕರೆ ಮತ್ತು ಆಂಧ್ರ ರಾಜ್ಯದಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಇನ್ನೊಂದು ಪ್ರಶ್ನೆ ಕೇಳಿದರೆ ಅದನ್ನು ಹೇಳುತ್ತೇನೆ.

ಶ್ರೀ ಗಂಗಾಧರ ನಾಮೋಷಿ.—ನಾರಯಣಪುರದ ಕಟ್ಟೆಯ ಸೈಟನ್ನು ಬದಲಾವಣೆ ಮಾಡಿದ್ದರಿಂದ ಖರ್ಚಿನಲ್ಲಿ ಎಷ್ಟು ವ್ಯತ್ಯಾಸವಾಗಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಬದಲಾವಣೆಯಾಗಿದೆಯೆಂದು ನಾನು ಹೇಳಲಿಲ್ಲ, ಅವರು ಆ ರೀತಿ ಒಂದು ಸೂಚನೆಯನ್ನು ಕೊಟ್ಟರು, ಅಷ್ಟೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ರಾಜ್ಯದಲ್ಲಲ್ಲದೆ ಆಂಧ್ರ ರಾಜ್ಯದಲ್ಲಿ ಎಷ್ಟು ನೀರಾವರಿಯಾಗುತ್ತದೆಂದು ಅವರು ಕೇಳಿದರು.

ಶ್ರೀ ಎಸ್. ನಿಜಲಿಂಗಪ್ಪ.—ಅವರ ಪ್ರಶ್ನೆಯನ್ನು ನಾನು ತಿಳಿದುಕೊಂಡಿದ್ದೇನೆ, ಆಮೇಲೆ ಅದನ್ನು ಹೇಳುತ್ತೇನೆಂದು ಅವರಿಗೆ ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರ ಪ್ರದೇಶದಲ್ಲಿ ಹೆಚ್ಚಾಗುತ್ತದೆಯೋ ನಮ್ಮ ರಾಜ್ಯದಲ್ಲ ಹೆಚ್ಚಾಗುತ್ತದೆಯೋ?

ಶ್ರೀ ಎಸ್. ನಿಜಲಿಂಗಪ್ಪ.—400 ಟಿ. ಎಂ. ಸಿ. ಎಫ್‌ಟಿ.–ಮಹಾರಾಷ್ಟ್ರಕ್ಕೆ, 800 ಆಂಧ್ರಕ್ಕೆ ಮತ್ತು 640 ಟಿ.ಎಂ.ಸಿ. ಎಫ್‌ಟಿ. ನಮಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ, ನೀರಾವರಿಗಾಗಿ; ಇನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಗೋದಾವರಿಯ ನೀರು ಆಂಧ್ರಕ್ಕೆ ಬರುತ್ತದೆ. ಈಗ ನಮಗೂ ಮಹಾರಾಷ್ಟ್ರಕ್ಕೂ ಹಂಚಿಕೆಯಾಗಬೇಕು; ಇದು ಎಷ್ಟು ನೀರು ಸಿಕ್ಕುತ್ತದೆ ಎನ್ನುವುದನ್ನವಲಂಬಿಸಿದೆ.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಮುಖ್ಯ ಮಂತ್ರಿಗಳೂ ಕೇಂದ್ರ ನೀರಾವರಿ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿದ್ದಿತು, ಆ ಸಮ್ಮೇಳನವನ್ನು ಯಾವಾಗ ಕರೆಯುವುದು?

ಶ್ರೀ ಎಸ್. ನಿಜಲಿಂಗಪ್ಪ.—ಈ ಹೊತ್ತು ಅದು ನಡೆಯಬೇಕಿತ್ತು, ಸಾಧ್ಯವಾಗಲಲ್ಲ, ಆಮೇಲೆ ನಡೆಯಬಹುದು.

ಶ್ರೀ ಎಸ್. ಆವಲರೆಡ್ಡಿ.—ನಮಗೆ ಇನ್ನೂ ಹೆಚ್ಚು ನೀರು ಸಿಕ್ಕುವ ಸಂಭವವಿದೆಯೋ ಅಥವಾ ಈಗ ಒದಗಿಸಿರುವದಕ್ಕಿಂತ ಜಾಸ್ತಿ ಸಿಕ್ಕುವ ಸಂಭವವಿಲ್ಲವೊ?

ಅಧ್ಯಕ್ಷರು.—ಅದು ಅವರು ಕೊಟ್ಟಿರುವ ಉತ್ತರದಲ್ಲಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಯೋಜನೆಗಳನ್ನು ಏಳೆಂಟು ವರ್ಷಗಳಲ್ಲಿ ಮುಗಿಸುತ್ತೇವೆಂದೂ, ಇದಕ್ಕೆ ಬೇಕಾಗುವ ಪೂರ್ತಿ ಹಣವನ್ನು ಕೇಂದ್ರ ಕೊಡಬೇಂದು ಮನವಿ ಮಾಡಿಕೊಂಡಿದ್ದೇವೆಂದೂ ಹೇಳಿದ್ದಾರೆ, ಅಲ್ಲಿ ನಮ್ಮ ಮಂತ್ರಿಗಳೇ ಇರುವುದರಿಂದ ಮೂರೇ ವರ್ಷಗಳಲ್ಲಿ ಪೂರೈಸುವುದಕ್ಕೆ ಸಾಧ್ಯವೆ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಮಂತ್ರಿಗಳು ಅಲ್ಲಲ್ಲ, ಅವರು ಕೇಂದ್ರ ಸರಕಾರದ ಮಂತ್ರಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳ ಉದ್ದೇಶ ಚೆನ್ನಾಗಿದೆ; ಆದರೆ ಅಲ್ಲಿ ಬರಿಯ ಕಟ್ಟೆಗಳನ್ನು ಕಟುತ್ತೀರೊ ಅಥವಾ ಕಾಲುವೆಗಳನ್ನೂ ಕಟ್ಟುತ್ತೀರೊ ಏಕೆಂದರೆ, ಒಂದು ಕಡೆ ಕಾಲುವೆ ತೆಗೆದಿದ್ದಾರೆ ಆದರೆ ಇನ್ನೂ ಕಟ್ಟೆಯನ್ನು ಕಟ್ಟಿಲ್ಲ.

ಅಧ್ಯಕ್ಷರು.—ಈಗ ಚರ್ಚೆ ಮತ್ತು ಟೀಕೆಗಳನ್ನು ಮಾಡಬಾರದು, ಪ್ರಶ್ನೆ ಕೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಣೆಕಟ್ಟು ಮತ್ತು ಕಾಲುವೆಗಳನ್ನು ಒಂದೇಸಾರಿ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಕಟ್ಟಿದ ನೀರು ನಿಲ್ಲಿಸಿದ ಮಾರನೆಯ ದಿವಸವೇ ಆ ನೀರನ್ನು ರೈತ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

New Hospitals opened in the State during the Third Five-Year Plan.

*Q.—384. Srl K. H. RANGANATH (Mudigere).—

Will the Government be pleased to state :—

(*a*) the number of new hospitals that were opened in the State during the Third-Five-Year Plan (including the Health Centres and Maternity Hospitals);